ವಿಜಯವಾಣಿ
ನಂ.1
ಕನ್ನಡ ದಿನ ಪತ್ರಿಕೆ

# ಸೈಬರ್ ಕ್ರೈಂ ಜಾಗೃತಿ ಕಾರ್ಯಕ್ರಮ

ಚನ್ನಮ್ಮನ ಕಿತ್ತೂರು: ಪಟ್ಟಣದ ರೋಟರಿ ಶಿಕ್ಷಣ ಸಂಸ್ಥೆಯಲ್ಲಿ ಪುಣೆಯ ಕ್ವಿಕ್ ಹೀಲ್ ಫೌಂಡೇಷನ್ ಸಹಯೋಗದಲ್ಲಿ ಬುಧವಾರ ಸೈಬರ್ ಕ್ರೈಂ ಹಾಗೂ ವಂಚನೆಗಳ ಕುರಿತು ಜಾಗೃತಿ ಕಾರ್ಯಕ್ರಮ ಜರುಗಿತು. ಧಾರವಾಡ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಬಿಸಿಎ ವಿದ್ಯಾರ್ಥಿಗಳಾದ ಐಶ್ವರ್ಯಾ ತುರಮರಿ, ಅರವಿಂದ ಬಬಲಿ ಹಾಗೂ ಸ್ಫೂರ್ತಿಎನ್.ಜಿ. ಸೈಬರ್ ವಂಚನೆಗಳ ವಿವಿಧ ರೂಪ, ಫಿಶಿಂಗ್, ವ್ಯಕ್ತಿತ್ವ ಕಳವು ಹಾಗೂ ಆನ್‌ಲೈನ್ ಮೋಸಗಳ ಬಗ್ಗೆ ಮಾಹಿತಿ ನೀಡಿದರು. ಸಾಮಾಜಿಕ ಮಾಧ್ಯಮ ಬಳಕೆ, ಆನ್‌ಲೈನ್ ಬ್ಯಾಂಕಿಂಗ್ ಮತ್ತು ಇಂಟರ್ನೆಟ್ ಸೇವೆ ಬಳಕೆ ಎಚ್ಚರಿಕೆ ವಹಿಸಬೇಕೆಂದು ಜಾಗೃತಿ ಮೂಡಿಸಿದರು. ಪ್ರವೀಣಕುಮಾರ ಚವ್ಹಾಣ, ಶಿವಾನಂದ ಸೋದರ, ಎಸ್.ಜಿ.ಹಿರೇಮಠ, ಸ್ನೇಹಾ ಮುತಗಿ, ಸವಿತಾ ಕಲಘಟಗಿ ಇತರರಿದ್ದರು.

ವಿಜಯವಾಣಿ ಚಿತ್ರ




ಚನ್ನಮ್ಮನ ಕಿತ್ತೂರಿನ ರೋಟರಿ ಶಿಕ್ಷಣ ಸಂಸ್ಥೆಯಲ್ಲಿ ಸೈಬರ್ ಕ್ರೈಂ ಹಾಗೂ ವಂಚನೆಗಳ ಕುರಿತು ಜಾಗೃತಿ ಕಾರ್ಯಕ್ರಮ ನಡೆಯಿತು. ಪ್ರವೀಣಕುಮಾರ ಚವ್ಹಾಣ, ಶಿವಾನಂದ ಸೋದರ, ಎಸ್.ಜಿ.ಹಿರೇಮಠ, ಸ್ನೇಹಾ ಮುತಗಿ, ಸವಿತಾ ಕಲಘಟಗಿ ಇತರರಿದ್ದರು.